ದಿನಾಂಕಃ 06-02-2019 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಪ್ರತಿವಾದಿ ಪರ ಜಿ ಆರ್ ಎ ವಕೀಲರಿಂದಃ**

ನಾನು ಪ್ರತಿವಾದಿಯಾಗಿದ್ದು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಶಪಥ ಪತ್ರವನ್ನು ಹಾಜರುಪಡಿಸಿದ್ದೇನೆ. ಅದನ್ನು ನಮ್ಮ ವಕೀಲರು ನನ್ನ ಹೇಳಿಕೆಯ ಮೇರೆಗೆ ತಯಾರಿಸಿದ್ದಾರೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿದೆ, ಇದರಲ್ಲಿ ಇರುವ ಸಹಿ ನನ್ನದು.

ಉಪ ವಿಭಾಗಾಧಿಕಾರಿಗಳು, ಪಾಂಡವಪುರ ಇವರ ಆದೇಶದ ದೃಢೀಕೃತ ನಕಲನ್ನು ನಿಡಿ 2 ಎಂದು , ವಾದಿಯು ಪ್ರತಿವಾದಿಯರಿಗೆ ತಮ್ಮ ವಕೀಲರ ಮೂಲಕ ಕೊಟ್ಟ ನೋಟೀಸನ್ನು ನಿಡಿ 3 ಎಂದು, ಅಂಚೆ ಲಕೋಟೆಯನ್ನು ನಿಡಿ 4 ಎಂದು , ಪಹಣಿಯನ್ನು ನಿಡಿ 5 ಎಂದು , ಓ.ಎಸ್ 34ಃ1986 ಇದರ ರೋಜನಾಮೆ ಹಾಗೂ ಮಧ್ಯಂತರ ಅರ್ಜಿಯ ದೃಢೀಕೃತ ನಕಲುಗಳನ್ನು ನಿಡಿ 6 ಮತ್ತು ನಿಡಿ 7 ಎಂದು , ಓ ಎಸ್ 119ಃ2018 ರ ವಾದ ಪತ್ರ ಹಾಗೂ ಮಧ್ಯಂತರ ಅರ್ಜಿ ನಂ 1 ರ ದೃಢೀಕೃತ ನಕಲುಗಳನ್ನು ನಿಡಿ 8 ಮತ್ತು 9 ಎಂದು , ಓ ಎಸ್ 1202018 ರ  ವಾದ ಪತ್ರ ಹಾಗೂ ಮದ್ಯಂತರ ಅರ್ಜಿ ನಂ1 ರ ದೃಢೀಕೃತ ನಕಲುಗಳನ್ನು ನಿಡಿ 10 ಮತ್ತು 11 ಎಂದು , ಓ ಎಸ್ 121ಃ2018 ರ ವಾದ ಪತ್ರ ಹಾಗೂ ಮಧ್ಯಂತರ ಅರ್ಜಿ ನಂ 1 ರ ದೃಢೀಕೃತ ನಕಲುಗಳನ್ನು ನಿಡಿ 12 ಮತ್ತು 13 ಎಂದು , ಓ ಎಸ್ 362ಃ2010 ರ ಎಮರ್ಜೆಂಟ್ ಕಾಪಿ ಅಪ್ಲಿಕೇಶನ್ ದೃಢೀಕೃತ ನಕಲುಗಳನ್ನು ನಿಡಿ 14 ಎಂದು , ಓ.ಎಸ್ 262ಃ2010 ರ ವಕಲಾತ್ ನ ದೃಢೀಕೃತ ನಕಲನ್ನು ನಿಡಿ 15 ಎಂದು, ಸಾಮಾನ್ಯ ಅಧಿಕಾರ ಪತ್ರದ ದೃಢೀಕೃತ ನಕಲನ್ನು ನಿಡಿ 16 ಎಂದು , ಆರ್ ಮಿಸ್ 84ಃ2015-16 ರಲ್ಲಿ ಸಲ್ಲಿಸಿದ ವಕಾಲತ್ ನ ದೃಢೀಕೃತ ನಕಲನ್ನು  ನಿಡಿ 17 ಎಂದು , ಓ ಎಸ್ 362ಃ2010 ರ ಪಿಡಬ್ಲ್ಯೂ 1 ಇವರ ಡಿಪೋಸಿಷನ್ ನ್ನು ನಿಡಿ 18 ಎಂದು , ಎಂ ಎ 3ಃ11 ರಲ್ಲಿ ಸಲ್ಲಿಸಿದ ಎಮೆರ್ಜೆಂಟ್ ಕಾಪಿ ಅಪ್ಲಿಕೇಶನ್ ದೃಢೀಕೃತ ನಕಲನ್ನು  ನಿಡಿ 19 ಎಂದು , ಎಂ ಎ 3ಃ2011 ರಲ್ಲಿ ಸಲ್ಲಿಸಿದ ವಕಾಲತ್ ನ ದೃಢೀಕೃತ ನಕಲನ್ನು ನಿಡಿ 20 ಎಂದು , ಓ ಎಸ್ 362ಃ2010 ರಲ್ಲಿ ಮಧ್ಯಂತರ ಅರ್ಜಿ ನಂಬರ್ 1 ಮತ್ತು 2 ರ ಮೇಲಿನ ಆದೇಶದ ದೃಢೀಕೃತ ನಕಲನ್ನು ನಿಡಿ 21 ಎಂದು ಗುರುತಿಸಲಾಯಿತು. ಆದ್ದರಿಂದ ವಾದಿಯ ದಾವೆಯನ್ನು ವಜಾ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದ ಂಡಾಧಿಕಾರಿಗಳು, ಕೃಷ್ಣರಾಜಪೇಟೆ.

ದಿನಾಂಕಃ 13-02-2019 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಪ್ರತಿವಾದಿ ಪರ ಶ್ರೀಮತಿ ವಿ ಕೆ ಎಸ್ ವಕೀಲರಿಂದಃ**

11 ಪಹಣಿಗಳನ್ನು ನಿಡಿ 22 ರಿಂದ ನಿಡಿ 32 ಎಂದು , ಇ ಸಿ ಯನ್ನು ನಿಡಿ 33 ಎಂದು , 5 ದೃಢೀಕೃತ ಕ್ರಯಪತ್ರಗಳನ್ನು ನಿಡಿ 34 ರಿಂದ ನಿಡಿ 38 ಎಂದು ಗುರುತಿಸಲಾಯಿತು. ಆದ್ದರಿಂದ ವಾದಿಯ ದಾವೆಯನ್ನು ವಜಾ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

**ಪಾಟೀ ಸವಾಲುಃ** ವಾದಿ ಪರ ಶ್ರೀ ಎನ್.ಎಂ ವಕೀಲರು ಕಾಲಾವಕಾಶ ಕೋರಿದ್ದು ಪಾಟೀ ಸವಾಲು ಮುಂದೂಡಲಾಯಿತು.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದಂಡಾಧಿಕಾರಿಗಳು, ಕೃಷ್ಣರಾಜಪೇಟೆ.

ದಿನಾಂಕಃ 18-03-2019 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲು ವಾದಿ ಪರ ಶ್ರೀ ಎನ್ ಎಂ ವಕೀಲರಿಂದಃ**

ಕನ್ನಡ ಓದಲು ಬರುವುದಿಲ್ಲ ಹಾಗೂ ಕನ್ನಡದಲ್ಲಿ ಸಹಿ ಮಾಡಲು ಬರುತ್ತದೆ. ನಾನು 6 ನೇ ತರಗತಿಯವರೆಗೆ ಓದಿದ್ದೇನೆ. ನಾನು 1 ನೇ ತರಗತಿ ಪಾಸು ಮಾಡಿ ನಂತರ ಮುಂದಿನ ತರಗತಿಗಳನ್ನು ಪಾಸ್ ಮಾಡಿ 6 ನೇ ತರಗತಿ ಓದಿದ್ದೇನೆ. ನಾನು ಕೆ ಆರ್ ಪೇಟೆ ಟೌನಿನ ಸರ್ಕಾರಿ ಶಾಲೆಯಲ್ಲಿ ಓದಿದ್ದೇನೆ.ಸದರಿ ಶಾಲೆ ಕನ್ನಡ ಮಾದ್ಯಮದ ಶಾಲೆ. ನನ್ನ ತಂದೆತಾಯಿಗೆ ನಾವು ಒಟ್ಟು 7 ಜನ ಮಕ್ಕಳು. ಮೊದಲನೆಯವರು ಭಾಗ್ಯಮ್ಮ, 2 ನೇಯವರು ಕೆ.ಎನ್.ನಾಗರಾಜು, 3 ನೇಯವರು ಜಯಮ್ಮ, 4 ನೇಯವರು ಸರೋಜಮ್ಮ , 5 ನೇಯವರು ಕಾಳೇಗೌಡ , 6 ನೇಯವರು ನಾಗರತ್ನ , 7 ನೇಯವರು ಯಶೋಧ. ನಮ್ಮ ಅಣ್ಣ ಕೆ ಎನ್ ನಾಗರಾಜು ವಕೀಲರಾಗಿದ್ದು , ನಾನು ಸಂತೆ ವ್ಯಾಪಾರ ಮಾಡುತ್ತೇನೆ. ನಮ್ಮ ಎಲ್ಲಾ ಆಸ್ತಿಗಳು ಇನ್ನೂ ಒಟ್ಟು ಕುಟುಂಬದಲ್ಲಿದ್ದು ಭಾಗ ಆಗಿಲ್ಲ. ನಮ್ಮ ಅಣ್ಣ ಕೆ ಎನ್ ನಾಗರಾಜು ರವರ ಆಫೀಸಿನಲ್ಲಿ ಈಗ ವಿ.ಕೆ. ಸ್ವರೂಪ ವಕೀಲರು ಹಾಗೂ ಎಸ್.ಪಿ. ಗಿರೀಶ್ ವಕೀಲರು ಜ್ಯೂನಿಯರ್ ಆಗಿ ಕೆಲಸ ಮಾಡುತ್ತಿದ್ದು ಅವರಿಗಿಂತ ಮುಂಚೆ ಕೆ.ಮಂಜುಳ ವಕೀಲರು ಜ್ಯೂನಿಯರ್ ಆಗಿದ್ದರು.

ವ್ಯವಸ್ಥಾ ಪತ್ರದ ಮೂಲಕ ವಾದಿಯರಿಗೆ ಹೋಗಿರುವ ಸ್ವತ್ತಿನಲ್ಲಿ ನಾವು ಮನೆ ಕಟ್ಟುತ್ತಿದ್ದೇವೆ ಎಂದು ವಾದಿಯರು ಈ ಕೇಸು ಹಾಕಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ನಿಪಿ 8 ರಿಂದ 15 ರವರೆಗೆ ಪೋಟೋಗಳನ್ನು ತೋರಿಸುತ್ತಿದ್ದು ಸದರಿ ಪೋಟೋಗಳಲ್ಲಿ ಕಾಣುವ ಕಟ್ಟಡದ ಬಗ್ಗೆ ತಕರಾರು ಮಾಡಿ ವಾದಿಯರು ಕೇಸು ಹಾಕಿದರು ಎಂದರೆ ಸರಿ. ವಾದಿಯರು ಈ ಕೇಸು ಹಾಕುವ ಸಮಯದಲ್ಲಿ ನಿಪಿ 8 ರಲ್ಲಿ ಕಾಣುವ ಪೋಟೋದಲ್ಲಿ ಕಟ್ಟಡ ಸದರಿ ಲೆವೆಲ್ ಗೆ ಇತ್ತು ಎಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ ಹಾಗೂ ಸದರಿ ಕಟ್ಟಡ ಕೇಸು ಹಾಕುವ ಪೂರ್ವದಲ್ಲಿ ಮಾಡಲಾಗಿದೆ ಎನ್ನುತ್ತಾರೆ. ಸಾಕ್ಷಿಗೆ ಈಗ 3 ಪೋಟೋಗಳನ್ನು ತೋರಿಸುತ್ತಿದ್ದು ಈಗ ಸದರಿ ಕಟ್ಟಡ ಸದರಿ ಪೋಟೋದಲ್ಲಿ ಕಾಣುವ ಲೆವೆಲ್ ಗೆ ಇದೆ ಎಂದರೆ ಸಾಕ್ಷಿ

ಹೌದು ಎಂದು ಒಪ್ಪಿದ್ದು ಸದರಿ ಪೋಟೋಗಳನ್ನು ಕ್ರಮವಾಗಿ ನಿಪಿ 20 ರಿಂದ 22 ಎಂದು ಗುರುತಿಸಲಾಯಿತು. ದಾವಾ ಸ್ವತ್ತು ವಾದಿಯರಿಗೆ ನಿಪಿ1 ರಂತೆ ವ್ಯವಸ್ಥಾಪತ್ರದ ಮೂಲಕ ಬಂದಿದೆ ಎಂದು ಸಾಕ್ಷಿಗೆ ಸದರಿ ವ್ಯವಸ್ಥಾ ಪತ್ರವನ್ನು ತೋರಿಸಿದ್ದು ಸಾಕ್ಷಿಯು ಸದರಿ ಆಸ್ತಿ ಅವರಿಗೆ ಬಂದಿಲ್ಲ ಹಾಗೂ ಸದರಿ ವ್ಯವಸ್ಥಾ ಪತ್ರ ಸುಳ್ಳು ಎನ್ನುತ್ತಾರೆ. ಸದರಿ ವ್ಯವಸ್ಥಾ ಪತ್ರದ ಆದಾರದ ಮೇಲೆ 1ನೇ ವಾದಿಯ ಗಂಡ ಸಿದ್ದಲಿಂಗೇಗೌಡರಿಗೆ ನಿಪಿ 3 ರಂತೆ ಪಹಣಿ ಆಗಿದೆ ಎಂದರೆ ಗೊತ್ತಿಲ್ಲ.

ನಾನು ಸ್ವಂತಕ್ಕೆ ಜಮೀನು ಕ್ರಯಕ್ಕೆ ಪಡೆದಿದ್ದೇನೆ. ನನ್ನ ಹೆಸರಿಗೆ ಪಹಣಿ ಇಂಡೀಕರಣ ಆಗಿದೆ. ಆರ್.ಟಿ.ಸಿ ನನ್ನ ಹೆಸರಿಗೆ ಆದಾಗ ಯಾವ ಮೂಲಕ ಬಂದಿದ್ದು ಎಂದು ಷರಾ ಬರೆದಿರುತ್ತಾರೆ ಎಂದರೆ ಸರಿ. ನಿಪಿ 3 ರಲ್ಲಿ ಕಲಂ ನಂ 10 ರಲ್ಲಿ ವ್ಯವಸ್ಥಾ ಪತ್ರದ ಮೂಲಕ ಬಂದಿದೆ ಎಂದು ನಮೂದು ಮಾಡಿದ್ದಾರೆ ಎಂದರೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ ಎನ್ನುತ್ತಾರೆ. ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿರುವ ವಿಚಾರ ಗೊತ್ತು. ಸದರಿ ಪ್ರತಿವಾದ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿದ್ದೇನೆ.

ಸಿದ್ದಲಿಂಗೇಗೌಡ ತಮ್ಮ ಜೀವಿತಾವಧಿಯಲ್ಲಿ ತಮ್ಮ ಕುಟುಂಬದ ಸ್ವತ್ತುಗಳನ್ನು ಯಾರು ಯಾರಿಗೆ ಹೋಗಬೇಕು ಎಂದು ದಿನಾಂಕ 06.02.1958 ರಂದು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ವ್ಯವಸ್ಥಾ ಪತ್ರ ಮಾಡಿದ್ದಾರೆ ಎಂದರೆ ಸುಳ್ಳು. ದಾವಾ ಸ್ವತ್ತಿನಲ್ಲಿ ಸಿದ್ದಲಿಂಗೇಗೌಡ ಸಾಯುವವರೆಗೂ ಸ್ವಾದೀನಲ್ಲಿದ್ದು ಅವರು ತೀರಿಕೊಂಡ ನಂತರ ವಾದಿಯರು ಸ್ವಾದೀನದಲ್ಲಿದ್ದಾರೆ ಎಂದರೆ ಸುಳ್ಳು. ವಾದಿಯರ ದಾವಾ ಸ್ವತ್ತನ್ನು ಲಪಟಾಯಿಸಲು ನಾವು ಬಲವಂತವಾಗಿ ಹಾಗೂ ಅಕ್ರಮವಾಗಿ ಅವರ ಸ್ವತ್ತಿನಲ್ಲಿ ಕಟ್ಟಡ ಕಟ್ಟಲು ಹೋಗಿದ್ದಕ್ಕೆ ಅವರು ನಮ್ಮ ಮೇಲೆ ಕೇಸು ಹಾಕಿದ್ದಾರೆ ಎಂದರೆ ಸುಳ್ಳು. ನಾವು ಕಟ್ಟಡ ಕಟ್ಟಲು ಅನ್ಯಕ್ರಾಂತ ಮಾಡಿಸಿದ್ದೇವಾ ಹಾಗೂ ಕಟ್ಟಡ ಪರವಾನಿಗೆ ಪಡೆದಿದ್ದೇವಾ ಎಂದರೆ ಸಾಕ್ಷಿಯು ನಮಗೆ ಸುಮಾರು ಕಡೆ ಜಮೀನು ಇದ್ದು ನಾವು ಜಮೀನಿನಲ್ಲಿ ಫಾರಂ ಹೌಸ್ ಮಾಡುತ್ತಿರುವಾಗ ವಾದಿಯರು ಬಂದು ನಮ್ಮ ಕಟ್ಟಡಕ್ಕೆ ತಕರಾರು ಮಾಡಿದ್ದಾರೆ ಎನ್ನುತ್ತಾರೆ. ವಿವಾದಿತ ಸ್ವತಿನಲ್ಲಿ ಕಟ್ಟಡ ಕಟ್ಟಲು ಲೈಸೆನ್ಸ್ ಪಡೆದಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ದಾವಾ ಸ್ವತ್ತು ವಾದಿಯರಿಗೆ ಬಂದಿರುವ ಬಗ್ಗೆ ವ್ಯವಸ್ಥಾಪತ್ರ ಹಾಜರುಪಡಿಸಿದ್ದು ಸದರಿ ಸ್ವತ್ತು ನಮಗೆ ಹೇಗೆ ಬಂತು ಎಂದು ತೋರಿಸಲು ನ್ಯಾಯಾಲಯದ ಮುಂದೆ ದಾಖಲೆಯನ್ನು ಹಾಜರುಪಡಿಸಿದ್ದೇವೆ. ದಾವಾ ಸ್ವತ್ತು ನಮಗೆ ಸೇರಿದ್ದು ಎಂದು ತೋರಿಸಲು ನ್ಯಾಯಾಲಯಕ್ಕೆ ದುರಸ್ತು ಕಾಪಿ , ಪಹಣಿ , ಮತ್ತು ಖಾತಾ ನಕಲನ್ನು ಕೊಟ್ಟಿದ್ದೇವೆ. ಸದರಿ ಸ್ವತ್ತು ನಮ್ಮ ತಾತನಿಂದ ನಮ್ಮ ತಂದೆಗೆ ಬಂದಿದ್ದು ನಂತರ ನಮ್ಮ ತಂದೆಯಿಂದ ನನ್ನ ಹೆಸರಿಗೆ ಎಂಟುವರೆ ಗುಂಟೆ ಹಾಗೂ ನಮ್ಮ ತಂದೆ ಹೆಸರಿಗೆ 27 ಗುಂಟೆ ಇರುವ ಬಗ್ಗೆ ಸದರಿ ಮೇಲೆ ಹೇಳಿದ 3 ದಾಖಲೆಗಳಲ್ಲಿ ನಮೂದು ಇದೆ ಎನ್ನುತ್ತಾರೆ. ದಾವಾ ಸ್ವತ್ತಿನ ಮೇಲೆ ನಮಗೆ ಮಾಲೀಕತ್ವ ಇರುವ ಬಗ್ಗೆ ಸಂಬಂದಪಟ್ಟ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ. ನಮ್ಮ ಪರವಾಗಿ ಹಾಜರುಪಡಿಸಿದ ಎಲ್ಲಾ ದಾಖಲೆಗಳನ್ನು ನನ್ನ ಕೈಯಲ್ಲಿ ಕೊಟ್ಟರೆ ದಾವಾ ಸ್ವತ್ತಿನ ಮೇಲೆ ನಮಗೆ ಮಾಲೀಕತ್ವ ಇರುವ ಬಗ್ಗೆ ಟೈಟಲ್ ಡೀಡನ್ನು ತೋರಿಸಲು ಆಗುವುದಿಲ್ಲ. ವಾದಿಯರು ವಕೀಲರ ಮೂಲಕ ದಾವಾ ಆಸ್ತಿಗೆ ಸಂಬಂದಪಟ್ಟಂತೆ ನಮಗೆ ಯಾವುದೇ ನೋಟೀಸ್ ಕಳುಹಿಸಿಲ್ಲ. ಸಾಕ್ಷಿಗೆ ಈಗ ನಿಡಿ 3 ನ್ನು ತೋರಿಸುತ್ತಿದ್ದು ಅದು ಯಾವ ದಾಖಲಾತಿ ಎಂದರೆ ಸಾಕ್ಷಿ ಸುಮ್ಮನಾಗುತ್ತಾರೆ. ನಿಡಿ 3 ಸೃಷ್ಟಿ ದಾಖಲೆಯಾ ಎಂದರೆ ಸಾಕ್ಷಿಯು ನನಗೆ ಅರ್ಥ ಆಗುತ್ತಿಲ್ಲ ಎನ್ನುತ್ತಾರೆ. ನಿಡಿ 3 ರಂತಹ ದಾಖಲೆ ಈ ಮೊದಲು ನಮಗೆ ಬಂದಿತ್ತ ಎಂದರೆ ಸಾಕ್ಷಿಯು ಬಂದಿರಬಹುದು ಆದರೆ ಯಾವುದು ಎಂದು ಗೊತ್ತಾಗುತ್ತಿಲ್ಲ ಎನ್ನುತ್ತಾರೆ. ನನ್ನ ಹೆಸರಿಗೆ ಯಾವುದಾದರೂ ಒಂದು ದಾಖಲೆ ಅಂಚೆ ಮೂಲಕ ಬಂದರೆ ಅದನ್ನು ಓದಿ ತಿಳಿದುಕೊಳ್ಳುವ ಆಸಕ್ತಿ ಇರುತ್ತದೆ ಎಂದರೆ ಸಾಕ್ಷಿಯು ಅದನ್ನು ನಮ್ಮ ಅಣ್ಣ ಓದುತ್ತಾರೆ ಎನ್ನುತ್ತಾರೆ. ಸದರಿ ದಾಖಲೆಯನ್ನು ನಮ್ಮ ಅಣ್ಣ ನನ್ನ ಕಡೆಯಿಂದ ಓದಿಸಿ ಅದನ್ನು ಕೇಳಿ ತಿಳಿದುಕೊಳ್ಳುವ ಅಸಕ್ತಿ ನನಗೆ ಇದೆಯಾ ಎಂದರೆ ಇಲ್ಲ ಎನ್ನುತ್ತಾರೆ. ನಿಡಿ 3 ಕ್ಕೆ ನಾವು ಪ್ರತ್ಯುತ್ತರ ನೋಟೀಸ್ ಕೊಟ್ಟಿಲ್ಲ.

ನಾವು ಕಟ್ಟಡ ಮಾಡುತ್ತಿರುವ ಜಾಗದ ಮಾರುಕಟ್ಟೆ ಬೆಲೆ ಜಾಸ್ತಿ ಇದೆ ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. ಅಲ್ಲಿ 1 ಗುಂಟೆಗೆ ಮಾರುಕಟ್ಟೆ ಬೆಲೆ ಈಗ ಎಷ್ಟು ನಡೆಯುತ್ತಿದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತೇ ಇಲ್ಲ ಎನ್ನುತ್ತಾರೆ. ಹಾಗಾಗಿ ನಾನು ಅಲ್ಲಿಗೆ ಯಾವತ್ತು ಹೋಗೇ ಇಲ್ಲ ಹಾಗಾಗಿ ನನಗೆ ಮಾರುಕಟ್ಟೆ ಬೆಲೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಅಲ್ಲಿ ನಾನು ಹೋಗುತ್ತೇನೆ ಮಾರುಕಟ್ಟೆ ಬೆಲೆ ಗೊತ್ತಿಲ್ಲ ಎನ್ನುತ್ತಾರೆ. ನಿಡಿ 3 ನ್ನು ನಾವೇ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸಾಕ್ಷಿಯು ಅದರ ಬಗ್ಗೆ ಗೊತ್ತೇ ಇಲ್ಲ ಎನ್ನುತ್ತಾರೆ.

ಶ್ರೀಮತಿ ಕೆ. ಮಂಜುಳ ವಕೀಲರು ನಮ್ಮ ಅಣ್ಣನ ಅಪೀಸಿನಲ್ಲಿ ಜ್ಯೂನಿಯರ್ ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ವ್ಯವಸ್ಥಾಪತ್ರದ ಮೂಲಕ ದಾವಾ ಜಮೀನು 1ನೇ ವಾದಿಯ ಗಂಡನಿಗೆ ಹೋಗಿದ್ದು ಸದರಿ ಜಮೀನನ್ನು ನಮ್ಮ ತಂದೆ , ಶ್ರೀಮತಿ ಮಂಜುಳ ವಕೀಲರ ತಾತ ಕೆ ಕೆ ಮಾದೇಗೌಡ , ಜೋಗಿನಿಂಗೇಗೌಡ ಅವನ ಹೆಂಡತಿ ಜವರಮ್ಮ ಸೇರಿಕೊಂಡು ಕಂದಾಯಾಧಿಕಾರಿಗಳೊಂದಿಗೆ ಶಾಮೀಲಾಗಿ ಕಾನೂನುಬಾಹಿರವಾಗಿ ನಿಪಿ 5 ರಂತೆ ದಾಖಲೆ ಸೃಷ್ಟಿ ಮಾಡಿದ್ದಾರೆ ಎಂದರೆ ಸುಳ್ಳು. ನಿಪಿ 5 ರ ಬಗ್ಗೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಕಾಲಾವಕಾಶ ಕೋರಿದ್ದು ಪಾಟೀ ಸವಾಲು ಮುಂದೂಡಲಾಯಿತು.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದ ಂಡಾಧಿಕಾರಿಗಳು, ಕೃಷ್ಣರಾಜಪೇಟೆ.